ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ರಾಜ್ಯದಲ್ಲಿ 'ಶಿಕ್ಷಣ ಅದಾಲತ್' ಮಾನ್ಯ ಮುಖ್ಯಮಂತ್ರಿಗಳಿಂದ ದಿನಾಂಕ : 22-10-2000 ದಂದು ಪ್ರಾರಂಭವಾಗಿದೆ.

ಆ) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಸುಧಾರಣೆ ಬಗ್ಗೆ ಶಿಕ್ಷಕರು, ಪೋಷಕರು, ತಜ್ಞರೊಂದಿಗೆ ಚರ್ಚಿಸಿ ಸುಧಾರಣೆ ಕಾರ್ಯ ಯೋಜನೆಯನ್ನು ರೂಪಿಸುವುದು. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಅನುಷ್ಠಾನದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರಗಳನ್ನು ಕಂಡುಕೊಳ್ಳುವುದು.

'ಶಿಕ್ಷಣ ಅದಾಲತ್' ನಲ್ಲಿ ಬರುವ ಸಾರ್ವಜನಿಕರ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸುವುದು.

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ವಿವಿಧ ಆಯಾಮಗಳನ್ನು ಪರಿಚಯಿಸುವುದು.

ನಗರ ಪ್ರದೇಶದಲ್ಲಿ ಹೆಚ್ಚುತ್ತಿರುವ ಮಧುಮೇಹದ ರೋಗದ ನಿಯಂತ್ರಣ ಕುರಿತು

4584 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶಗಳಲ್ಲಿ ಹೆಚ್ಚುತ್ತಾ ಇರುವ ಮಧುಮೇಹ (ಸಕ್ಕರೆ ಖಾಯಿಲೆ) ರೋಗದ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ವಿಶೇಷ ಯೋಜನೆಯನ್ನೇನಾದರೂ ರೂಪಿಸಿದೆಯೇ?

ಆ) ಪ್ರತಿ ಜಿಲ್ಲೆಯ ಆಸ್ಪತ್ರೆಗಳಲ್ಲಿ ಮಧು ಮೇಹ ರೋಗದ ಬಗೆಗೆ ಪ್ರತ್ಯೇಕ ವಿಭಾಗ ಪ್ರಾರಂಭಿಸಿ ತಜ್ಞರನ್ನು ನಿಯೋಜಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಡಾ. ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಜಿಲ್ಲಾ ಮಧುಮೇಹ ನಿಯಂತ್ರಣ ಕಾರ್ಯಕ್ರಮವಿರುತ್ತದೆ. ನಗರ ಪ್ರದೇಶಗಳಿಗೆ ವಿಶೇಷವಾದ ಯೋಜನೆಯ ಇರುವುದಿಲ್ಲ.

ಆ) ಈಗಾಗಲೇ ಆಯಾ ಜಿಲ್ಲೆ ಆಸ್ಪತ್ರೆಗಳಲ್ಲಿ ವೈದ್ಯಕೀಯ ವಿಭಾಗದಲ್ಲಿ ಪರಿಣಿತ ವೈದ್ಯರು ಇದ್ದು, ಅವರು ಈ ಕಾಯಿಲೆಯ ಒಟ್ಟಾರೆ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ. ಪ್ರತ್ಯೇಕ ವಿಭಾಗದ ಅವಶ್ಯಕತೆ ಇರುವುದಿಲ್ಲ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳ ಅಭಿವೃದ್ಧಿ

4585 - ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳ ಅಭಿವೃದ್ಧಿಗಾಗಿ ಸರ್ಕಾರವು, ಸಾಲ ಮತ್ತು ಸಹಾಯಧನವನ್ನು ಪಡೆದಿದೆಯೇ?

ಅ) ಹಾಗಿದ್ದಲ್ಲಿ ಇದರ ವಿವರಗಳೇನು ?

ಇ) ಈ ಆರ್ಥಿಕ ನೆರವಿನಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ?

ಈ) ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಯಾವ ಅಭಿವೃದ್ಧಿ ಕಾರ್ಯಕೈಗೊಳ್ಳಲಾಗಿದೆ ?

ಉ) ಟ್ರಾಮಾಸೆಂಟರ್ ಮತ್ತು ಐ.ಸಿ.ಸಿ. ಯು ಘಟಕವನ್ನು ಪ್ರಾರಂಭಿಸಲು ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ವೈದ್ಯಕೀಯ ಕಾಲೇಜುಗಳ ಅಭಿವೃದ್ಧಿಗಾಗಿ ವಿದೇಶಗಳಿಂದ ಆರ್ಥಿಕ ಸಹಾಯವನ್ನು ಪಡೆದಿರುವುದಿಲ್ಲ. ಆದಾಗ್ಯೂ 6 ಬೋಧನಾ ಆಸ್ಪತ್ರೆಗಳ ಅಭಿವೃದ್ಧಿಗಾಗಿ ಕೆ.ಹೆಚ್.ಎಸ್.ಡಿ.ಪಿ. ಮುಖಾಂತರ ರೂ. 29.2 ಕೋಟಿಗಳನ್ನು ವಿಶ್ವಬ್ಯಾಂಕಿನ ಆರ್ಥಿಕ ಸಹಾಯ ಪಡೆಯಲಾಗುತ್ತಿದೆ.

ಆ) ವಿಶ್ವಬ್ಯಾಂಕಿನ ಸಹಾಯವು ಶೇ. 70ರಷ್ಟು ಸಾಲದ ರೂಪದಲ್ಲಿ ಮತ್ತು ಶೇ. 30ರಷ್ಟು ಸಹಾಯಾನುಧಾನದ ರೂಪದಲ್ಲಿ ಭಾರತ ಸರ್ಕಾರದ ಮುಖಾಂತರ ಬರುತ್ತದೆ. ಭಾರತ ಸರ್ಕಾರವು ಸಾಲದ ಮೇಲೆ ಶೇ. 12.5ರಷ್ಟು ವಾರ್ಷಿಕ ಬಡ್ಡಿಯನ್ನು ವಿಧಿಸುತ್ತದೆ.

ಇ) ಕೆ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ವೈದ್ಯಕೀಯ ಕಾಲೇಜುಗಳಿಗೆ ಹೊಂದಿಕೊಂಡಿರುವ ಈ ಕೆಳಕಂಡ ಆಸ್ಪತ್ರೆಗಳ ಕಟ್ಟಡದ ಅಭಿವೃದ್ಧಿಗಾಗಿ ಸಿಬ್ಬಂದಿ ತರಬೇತಿ ಹಾಗೂ ಉಪಕರಣಗಳ ಪೂರೈಕೆಗಾಗಿ ಖರ್ಚು ಮಾಡಲು ಯೋಜಿಸಲಾಗಿದೆ.

1. ಕೆ.ಆರ್. ಆಸ್ಪತ್ರೆ
2. ವಿಕ್ಟೋರಿಯಾ ಆಸ್ಪತ್ರೆ
3. ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ
4. ವಾಣಿವಿಲಾಸ ಆಸ್ಪತ್ರೆ
5. ಚಿಲುವಾಂಬಾ ಆಸ್ಪತ್ರೆ
6. ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಈ) ಮಂಡ್ಯ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯನ್ನು 310 ಹಾಸಿಗೆಗಳಿಂದ 400 ಹಾಸಿಗೆಗಳಿಗೆ ವಿಸ್ತರಿಸಿ ನವೀಕರಿಸುವ ಕಾಮಗಾರಿಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರಿದೆ. ವಿಶ್ವಬ್ಯಾಂಕ್ ವಾಸ್ತುಶಿಲ್ಪಗಳು ಅನುಮೋದಿಸಿರುವ ನಕ್ಷೆಯಂತೆ ಹಾಗೂ ವಿಶ್ವಬ್ಯಾಂಕ್ ನಿಯಮಾವಳಿಯಂತೆ ಈ ಆಸ್ಪತ್ರೆ ಕಾಮಗಾರಿಗಳಿಗೆ ಸ್ಪರ್ಧಾತ್ಮಕ ಗುತ್ತಿಗೆ ಕರೆದು ಕಾಮಗಾರಿಯನ್ನು ರೂ 411.74 ಲಕ್ಷಗಳ ಮೊತ್ತದಲ್ಲಿ ಈ ಆಸ್ಪತ್ರೆಯ ಕಟ್ಟಡ ಕಾಮಗಾರಿಯು 27.3.98ರಂದು ಪ್ರಾರಂಭಗೊಂಡಿದ್ದು ಈಗ ಪೂರ್ಣಗೊಂಡಿರುತ್ತದೆ. ಈ ಕಾಮಗಾರಿಗಳಲ್ಲಿ 534.7 ಚಮಿ. ವಿಸ್ತೀರ್ಣದಲ್ಲಿ ತುರ್ತು ಚಿಕಿತ್ಸಾ ವಿಭಾಗ ಶಸ್ತ್ರ ಚಿಕಿತ್ಸಾ ಕೊಠಡಿ

ವಾರ್ಡ್‌ಗಳು, ರೇಡಿಯೋಲಜಿ ವಿಭಾಗ, ಹೊರರೋಗಿ ವಿಭಾಗ ಗ್ಯಾರೇಜ್ ಕಾರಿಡಾರ್‌ಗಳು, ರ್‍ಯಾಂಪ್, 5 ವೈದ್ಯರುಗಳ, 10 ದಾದಿಯರ ಮತ್ತು 10 ಗ್ರೂಪ್ 'ಡಿ' ನೌಕರರ ವಸತಿಗೃಹಗಳ ನೀರು ಸರಬರಾಜು, ನೈರ್ಮಲೀಕರಣ ಹಾಗೂ ವಿದ್ಯುದೀಕರಣ ತೆಗೆದುಕೊಳ್ಳಲಾಗಿದೆ.

ಇದಲ್ಲದೆ ವರ್ಕ್‌ಶಾಪ್ ರಕ್ತನಿಧಿ ಕೇಂದ್ರ ಶವಾಗಾರ, ಸೋಲಾರ್ ವಾಟರ್ ಹೀಟರ್, ಲ್ಯಾಂಡ್ ಸ್ಕೇಪಿಂಗ್ ಇತ್ಯಾದಿ ಕಾಮಗಾರಿಗಳಿಗೆ ಒಟ್ಟು ರೂ. 64.54ಲಕ್ಷ ಮಂಜೂರಾಗಿದ್ದು ಇದುವರೆವಿಗೆ ರೂ. 56.62 ಲಕ್ಷ ವೆಚ್ಚವಾಗಿರುತ್ತದೆ.

ಊ) ಟ್ರಾಮಾಸೆಂಟರ್ ಮತ್ತು ಐ.ಸಿ.ಸಿ.ಯು ಕಟ್ಟಡಗಳ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಟ್ರಾಮಾಸೆಂಟರ್ ಪ್ರಾರಂಭಿಸಲಾಗಿದೆ. ಐ.ಸಿ.ಸಿ. ಘಟಕ ಶೀಘ್ರವಾಗಿ ಪ್ರಾರಂಭಿಸುವ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಯು.ಜಿ.ಸಿ. ಇಂದ ಪ್ರಥಮ ದರ್ಜೆ ಕಾಲೇಜುಗಳಿಗೆ ಸಹಾಯ ಧನ

4587 - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಯು.ಜಿ.ಸಿ.ಯಿಂದ ಯಾವ ಯಾವ ಕಾಲೇಜುಗಳು ಸಹಾಯ ಧನ ಪಡೆಯುತ್ತಿದೆ?

ಇ) ಪ್ರಸಕ್ತ ವರ್ಷದಲ್ಲಿ, ಪ್ರಥಮ ದರ್ಜೆ ಕಾಲೇಜುಗಳಿಗೆ ಕಟ್ಟಡದ ಸೌಲಭ್ಯವನ್ನು ಒದಗಿಸಲು ವೆಚ್ಚ ಮಾಡುವ ಅನುದಾನ ಮೊತ್ತವೆಷ್ಟು?

ಡಾ॥ ಜಿ. ಪರಮೇಶ್ವರ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ)	ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು	-	151
	ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು	-	292
	ಅನುದಾನ ರಹಿತ ಪ್ರಥಮ ದರ್ಜೆ ಕಾಲೇಜುಗಳು	-	427
	ಒಟ್ಟು	-	**870**

ಆ) ಅನುಬಂಧದಲ್ಲಿ ನೀಡಲಾಗಿದೆ.

ಇ) ರೂ. 10.00 ಲಕ್ಷ.